# ಕರ್ನಾಟಕ ಸರ್ಕಾರ

ಇ.ಕ್ರಮಾಂಕ: ಇಡಿ/514/ಯುಬಿವಿ/2023.

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ:14.06.2024.

**ಇಂದ**
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ,
ಬೆಂಗಳೂರು

**ಇವರಿಗೆ**
ಜಂಟಿ ನಿರ್ದೇಶಕರು
(ಫೋಟೋ & ಫಿಲ್ಮ್ಸ್/ಕಮರ್ಷಿಯಲ್ ಪಬ್ಲಿಸಿಟಿ),
# 17, "ವಾರ್ತಾ ಸೌಧ" ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,
ಭಗವಾನ್ ಮಹಾವೀರ ರಸ್ತೆ(ಇನ್‌ಫಂಟ್ರಿ ರಸ್ತೆ),
ಬೆಂಗಳೂರು – 560 001.

**ಮಾನ್ಯರೇ,**

ವಿಷಯ: ಡಾ. ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯದ ನೂತನ ಕುಲಪತಿಗಳ ಆಯ್ಕೆಗಾಗಿ ಜಾಹೀರಾತು ಪ್ರಕಟಿಸುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಡಾ. ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ, ಬೆಂಗಳೂರು ವಿಶ್ವವಿದ್ಯಾಲಯದ ನೂತನ ಕುಲಪತಿಗಳ ನೇಮಕಾತಿಗಾಗಿ ಅರ್ಹ ವ್ಯಕ್ತಿಗಳಿಂದ ಅರ್ಜಿಗಳನ್ನು ಆಹ್ವಾನಿಸಲು ಈ ಪತ್ರದೊಂದಿಗೆ ಲಗತ್ತಿಸಲಾಗಿರುವ ಆಂಗ್ಲ ಭಾಷೆಯಲ್ಲಿ ಜಾಹೀರಾತನ್ನು ಅತ್ಯಧಿಕ ಪ್ರಸಾರವುಳ್ಳ ರಾಷ್ಟ್ರಮಟ್ಟದ ಆಂಗ್ಲ ದಿನಪತ್ರಿಕೆಗಳಲ್ಲಿ ಹಾಗೂ ಕನ್ನಡ ಅವತರಣಿಕೆಯ ಜಾಹೀರಾತನ್ನು ರಾಜ್ಯ ಮಟ್ಟದ ತಲಾ 5 ಕನ್ನಡ ಮತ್ತು ಆಂಗ್ಲ ದಿನಪತ್ರಿಕೆಗಳಲ್ಲಿ ಪ್ರಕಟಿಸುವಂತೆ ಹಾಗೂ ಈ ಪ್ರಕಟಣೆಗೆ ತಗಲುವ ವೆಚ್ಚದ ಬಿಲ್ಲನ್ನು ಹಣ ಪಾವತಿಗಾಗಿ ಕುಲಸಚಿವರು, ಡಾ. ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ, ಬೆಂಗಳೂರು ಇವರಿಗೆ ಕಳುಹಿಸಿ ಬಿಲ್ಲುಗಳ ಪ್ರತಿಗಳೊಂದಿಗೆ ಸರ್ಕಾರಕ್ಕೆ ಮಾಹಿತಿ ನೀಡುವಂತೆ ಕೋರಲು ನಿರ್ದೇಶಿತನಾಗಿದ್ದೇನೆ.

ಜಾಹೀರಾತುಗಳ ವಿದ್ಯುನ್ಮಾನ ಪ್ರತಿಗಳನ್ನು ಇ-ಮೇಲ್ ಮೂಲಕವೂ ಸಹ ಕಳುಹಿಸಲಾಗಿದೆ.

**ತಮ್ಮ ನಂಬುಗೆಯ**

**(ಕೆ. ಮಂಜುನಾಥ)** 14/6/24
ಸರ್ಕಾರದ ಅಧೀನ ಕಾರ್ಯದರ್ಶಿ
ಉನ್ನತ ಶಿಕ್ಷಣ ಇಲಾಖೆ(ವಿಶ್ವವಿದ್ಯಾಲಯಗಳು-2)

14/6/24

**ಪ್ರತಿ :-**
ಕುಲಸಚಿವರು, ಡಾ. ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯದ, ಇವರಿಗೆ ಜಂಟಿ ನಿರ್ದೇಶಕರು (ಫೋಟೋ & ಫಿಲ್ಮ್ಸ್/ಕಮರರ್ಷಿಯಲ್ ಪಬ್ಲಿಸಿಟಿ), ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕಾ ಇಲಾಖೆ ಇವರನ್ನು ಸಂಪರ್ಕಿಸಿ ಜಾಹೀರಾತು ಪ್ರಕಟಣೆಗೆ ತುರ್ತು ಅಗತ್ಯ ಕ್ರಮವಹಿಸಲು ಹಾಗೂ ಜಾಹೀರಾತು ಪ್ರಕಟಣೆ ಬಿಲ್ಲನ್ನು ಪಾವತಿಸಲು ಸೂಚಿಸಲಾಗಿದೆ.

**ಕರ್ನಾಟಕ ಸರ್ಕಾರ**

# ಉನ್ನತ ಶಿಕ್ಷಣ ಇಲಾಖೆ

**ಬಹುಮಹಡಿಗಳ ಕಟ್ಟಡ, ಬೆಂಗಳೂರು**

ಸಂಖ್ಯೆ: ಇಡಿ/514/ಯುಬಿವಿ/2023 ದಿನಾಂಕ: 14.06.2024.

## ಅಧಿಸೂಚನೆ

**ಡಾ. ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕಾನಾಮಿಕ್ಸ್ ವಿಶ್ವವಿದ್ಯಾಲಯದ ಕುಲಪತಿಯ ಹುದ್ದೆಯ ನೇಮಕಾತಿ**

1. ಡಾ. ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕಾನಾಮಿಕ್ಸ್ ವಿಶ್ವವಿದ್ಯಾಲಯದ ಕುಲಪತಿಯ ಹುದ್ದೆಗೆ ಡಾ. ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ, ವಿದ್ಯಾಲಯ ವಿಶ್ವವಿದ್ಯಾಲಯಗಳ ಅಧಿನಿಯಮ 2018ರ ಪ್ರಕರಣ 13(4)(i) ರ ಉಪಬಂಧಗಳನುಸಾರ ನೇಮಕಾತಿ ಮಾಡಲು ಈ ಕೆಳಕಂಡ ಅರ್ಹತೆಯುಳ್ಳ ಪ್ರಾಧ್ಯಾಪಕರು/ಶಿಕ್ಷಣ ತಜ್ಞರುಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

i. ಅತ್ಯುನ್ನತ ಮಟ್ಟದ ಸಾಮರ್ಥ್ಯ, ಪ್ರಾಮಾಣಿಕತೆ, ನೈತಿಕತೆ ಮತ್ತು ಸಾಂಸ್ಥಿಕ ಬದ್ಧತೆಯುಳ್ಳ ವ್ಯಕ್ತಿಯಾಗಿದ್ದು, ಅರ್ಥಶಾಸ್ತ್ರ, ಹಣಕಾಸಿನ ನಿರ್ವಹಣೆ, ಸಮಾಜ ವಿಜ್ಞಾನ, ಗಣಿತ, ಅಂಕಿಅಂಶಗಳು, ಬ್ಯಾಂಕಿಂಗ್ ಅಥವಾ ಇತರ ಸಂಬಂಧಿತ ವಿಷಯಗಳಲ್ಲಿ ಕನಿಷ್ಠ ಇಪ್ಪತ್ತೈದು ವರ್ಷಗಳ ಬೋಧನಾ ಅನುಭವವನ್ನು ಹೊಂದಿರುವ; ಅದರಲ್ಲಿ ಕನಿಷ್ಠ ಹತ್ತು ವರ್ಷಗಳು ವಿಶ್ವವಿದ್ಯಾಲಯ ಧನಸಹಾಯ ಆಯೋಗದ ಪ್ರಮಾಣಕಗಳ ಅನುಸಾರವಾಗಿ ಪ್ರಾಧ್ಯಾಪಕರಾಗಿ ಅಥವಾ ಪ್ರತಿಷ್ಠಿತ ಸಂಶೋಧನೆ ಮತ್ತು ಅಭಿವೃದ್ಧಿ ಅಥವಾ ಆಡಳಿತಾತ್ಮಕ ಸಂಘಟನೆಗಳಲ್ಲಿ ಸಮಾನವಾದ ಹುದ್ದೆಯನ್ನು ಹೊಂದಿರುವ ಶ್ರೇಷ್ಠ ಶೈಕ್ಷಣಿಕ ತಜ್ಞರಾಗಿರತಕ್ಕದ್ದು.

ii. ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕಾನಾಮಿಕ್ಸ್ ವಿಶ್ವವಿದ್ಯಾಲಯದ ಕುಲಪತಿಯು ಡಾ. ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ, ವಿದ್ಯಾಲಯ ವಿಶ್ವವಿದ್ಯಾಲಯಗಳ ಅಧಿನಿಯಮ 2018ರ ಪ್ರಕರಣ 13(2)ರಲ್ಲಿ ನಿಯಮಿಸಿರುವಂತೆ, 04 ವರ್ಷಗಳು ಅಥವಾ 67 ವರ್ಷಗಳ ವಯಸ್ಸಾಗುವವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಕುಲಾಧಿಪತಿಗಳು ಇಷ್ಟಪರ್ಯಂತ ಪದಧಾರಣಾವಧಿಯನ್ನು ಹೊಂದಿರುತ್ತಾರೆ. ಆದುದರಿಂದ, ಕುಲಾಧಿಪತಿಗಳ ಇಷ್ಟಪರ್ಯಂತ ನಾಲ್ಕು ವರ್ಷಗಳ ಪದಧಾರಣ ಅವಧಿಯ ಅವಕಾಶವಿರುವ ವಯೋಮಿತಿಯನ್ನು ಹೊಂದಿರತಕ್ಕದ್ದು".

2. ಡಾ. ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕಾನಾಮಿಕ್ಸ್ ವಿಶ್ವವಿದ್ಯಾಲಯದ ಕುಲಪತಿ ಹುದ್ದೆಯ ನೇಮಕಾತಿಗೆ ಉಮೇದುವಾರಿಕೆ ಸಲ್ಲಿಸ ಬಯಸುವ ಆಸಕ್ತರು ತಮ್ಮ ವಿದ್ಯಾರ್ಹತೆ, ಸಂಶೋಧನೆ, ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಅನುಭವಗಳು, ಸಾಧನೆಗಳು ಹಾಗೂ ಇತರೆ ವಿವರಗಳನ್ನು ಯುಜಿಸಿಯಿಂದ ನಿಗದಿಪಡಿಸಲಾಗಿರುವ ನಮೂನೆಯಲ್ಲಿ

ಭರ್ತಿ ಮಾಡಿ ಮುದ್ರಿತ ಅರ್ಜಿಗಳನ್ನು ತ್ರಿಪ್ರತಿಗಳಲ್ಲಿ ಈ ನೇಮಕಾತಿ ಜಾಹೀರಾತು ಪ್ರಕಟಣೆಯಾದ 20 ದಿನಗಳ ಒಳಗಾಗಿ (ಸಾರ್ವತ್ರಿಕ ರಜಾ ದಿನಗಳನ್ನು ಒಳಗೊಂಡಂತೆ) ಸ್ವೀಕೃತವಾಗುವಂತೆ **"ಸರ್ಕಾರದ ಪ್ರಧಾನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, 6ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು - 560 001"** ಇವರಿಗೆ ಸಲ್ಲಿಸತಕ್ಕದ್ದು. ಅರ್ಜಿ ನಮೂನೆಯನ್ನು ಒಳಗೊಂಡಿರುವ ಲಕೋಟೆಯ ಮೇಲೆ **"ಡಾ. ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ವಿಶ್ವವಿದ್ಯಾಲಯದ ಉಪಕುಲಪತಿ ಹುದ್ದೆಗೆ ಅರ್ಜಿ"** ಎಂದು ಬರೆಯತಕ್ಕದ್ದು. (PDF) ರೂಪದ ವಿದ್ಯುನ್ಮಾನ ಅರ್ಜಿಗಳನ್ನು ಏಕ ಪ್ರತಿಯಲ್ಲಿ e-mail souniversitysection2@gmail.com ಗೆ ನಿಗದಿತ ಅವಧಿಯೊಳಗೆ ಕಳುಹಿಸತಕ್ಕದ್ದು.

3. ಪ್ರಸ್ತುತ ಸೇವೆಯಲ್ಲಿರುವ ವ್ಯಕ್ತಿಗಳು ಅವರ ವಿರುದ್ಧ ಇಲಾಖಾ/ಕ್ರಿಮಿನಲ್ ವಿಚಾರಣೆಗಳು ಬಾಕಿ ಇರದ/ಹೂಡಲು ಉದ್ದೇಶಿಸಿರದ ಮತ್ತು ಈ ಹಿಂದೆ ವಿಚಾರಣೆಗಳನ್ನು ನಡೆಸಿ ದಂಡನೆ ವಿಧಿಸಲಾಗಿರದ ಬಗ್ಗೆ ಹಾಗೂ ಕಳಂಕಿತ ಸೇವಾ ಚರಿತ್ರೆ ಹಾಗೂ ನೇಮಕಾತಿ ವಿವಾದಗಳನ್ನು ಹೊಂದಿರದ ಬಗ್ಗೆ ಅವರು ಸೇವೆ ಸಲ್ಲಿಸುತ್ತಿರುವ ಸಂಸ್ಥೆಯ ಮುಖ್ಯಸ್ಥರಿಂದ ದೃಢೀಕರಿಸಿ ಪ್ರಮಾಣ ಪತ್ರಗಳನ್ನು ಹಾಗೂ ಸೇವೆಯಿಂದ ವಯೋನಿವೃತ್ತಿ ಹೊಂದಿರುವವರು ಈ ಕುರಿತಂತೆ ಸ್ವಯಂ ದೃಢೀಕರಣ ಪ್ರಮಾಣ ಪತ್ರಗಳನ್ನು ಅರ್ಜಿಯೊಂದಿಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು, ಪ್ರಮಾಣ ಪತ್ರಗಳಲ್ಲಿ ತಪ್ಪು ಮಾಹಿತಿ ನೀಡಿರುವುದು ಕಂಡು ಬಂದಲ್ಲಿ ಸಂಬಂಧಿಸಿದವರನ್ನು ಕಠಿಣ ಕ್ರಮಕ್ಕೆ ಗುರಿಪಡಿಸಲಾಗುವುದು. ಈ ರೀತಿಯಲ್ಲಿ ಪ್ರಮಾಣ ಪತ್ರಗಳನ್ನು ಸಲ್ಲಿಸದ ವ್ಯಕ್ತಿಗಳ ಅರ್ಜಿಗಳನ್ನು ಆಯ್ಕೆಗೆ ಪರಿಗಣಿಸಲಾಗುವುದಿಲ್ಲ.

4. ಅರ್ಜಿ ಸಲ್ಲಿಸಲು ನಿಗದಿಪಡಿಸಲಾಗಿರುವ ನಮೂನೆ/ಪ್ರಪತ್ರವನ್ನು ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರದ **https://hed.karnataka.gov.in** ಅಧಿಕೃತ ಜಾಲತಾಣದಿಂದ ಪಡೆಯಬಹುದು.

5. ಅಪೂರ್ಣ ಮತ್ತು ನಿರ್ದಿಷ್ಟಪಡಿಸಲಾದ ನಮೂನೆ ಪ್ರಪತ್ರದಲ್ಲಿರದ ಹಾಗೂ ನಿಗದಿತ ಅವಧಿ/ಗಡುವು ಮುಕ್ತಾಯವಾದ ನಂತರ ಸ್ವೀಕೃತವಾಗುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಅಂಚೆ ಅಥವಾ ಇತರೆ ಸ್ವರೂಪದ ವಿಳಂಬಗಳಿಗೆ ಉನ್ನತ ಶಿಕ್ಷಣ ಇಲಾಖೆಯು ಜವಾಬ್ದಾರವಾಗುವುದಿಲ್ಲ.

6. ನೇಮಕಾತಿ ಪ್ರಕ್ರಿಯೆಯಲ್ಲಿ ವಾಮ ಮಾರ್ಗದ ಮೂಲಕ ಅನುಚಿತ ಪ್ರಭಾವ ಬೀರಲು ಪ್ರಯತ್ನಿಸುವ ವ್ಯಕ್ತಿಗಳ ಅಭ್ಯರ್ಥಿತ್ವವನ್ನು ರದ್ದುಗೊಳಿಸಿ, ಅರ್ಜಿಯನ್ನು ತಿರಸ್ಕರಿಲಾಗುವುದು.

ಸಹಿ/-
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ

GOVERNMENT OF KARNATAKA

# Higher Education Department

## MS Building, Bangalore

No: ED/514/UBV/2023 Date:14.06.2024.

# Notification

**Selection of Vice-Chancellor of University of Dr. B.R. Ambedkar School of Economics University, Bangalore.**

1. The Government of Karnataka invites applications for the selection of Vice-Chancellor of University of **Dr. B.R. Ambedkar School of Economics University, Bangalore**, Karnataka as per Section 13(4)(i) of **Dr. B.R. Ambedkar School of Economics University Act, 2018** from eligible and distinguished Academicians/Professors with following credentials.

i. A distinguished academician with specialization in Economics, Fiscal Management, Social Science, Mathematics, Statistics, Banking or other related subjects with a minimum teaching experience of twenty-five years out of which at least ten years as Professor as per University Grants Commission norms or in an equivalent position at a reputed research and development or administrative organization with proof of having demonstrated academic leadership of the highest level of competence, integrity, morals and institutional commitment;

ii. As provided in Section 13(2) of the **Dr. B.R. Ambedkar School of Economics University Act, 2018**, the Vice-Chancellor shall, subject to the pleasure of the Chancellor, hold the office for a maximum period of 4 years or until he attains the age of Sixty Seven years whichever is earlier. Consequently, a person to be appointed as Vice-Chancellor shall have clear four years of tenure.

2. Eligible candidates interested in applying for the post of Vice-Chancellor of University of **Dr. B.R. Ambedkar School of Economics University, Bangalore**, may submit application in the UGC prescribed proforma attached herewith by providing details of their qualification, academic, research credentials and administrative experiences, achievements & other details in triplicate within 20 days from the date of publication of this

...2

advertisement (including general holidays) to the Principal Secretary to Government, Higher Education Department,6 Floor, Gate No: 02, M.S. Building, Banglore-560 001. Envelope containing the application form should be superscribed as **"APPLICATION FOR THE POST OF VICE CHANCELLOR, DR. B.R. AMBEDKAR SCHOOL OF ECONOMICS UNIVERSITY"** One copy of the application in PDF format should be sent electronically to the e-mail: highereducationso1@gmail.com within the prescribed period.

3. Persons currently in service are required to submit an attested certificate from their employer to confirm that no departmental/criminal inquiry are pending/not intended to be initiated against them and not previously initiated and penalised and that he/she is neither having a tainted service history nor is their appointment in dispute. Retired candidates should file a self attested certificate to this effect. Strict action as per law will be initiated if faulty information is found to be given in the certificates. Applications without this certificate will not be considered for selection.

4. The application proforma is available on the Government of Karnataka, Higher Education Department website **https://hed.karnataka.gov.in**

5. Incomplete applications submitted without relevant documents and applications not made in prescribed proforma and applications received after the stipulated time limit will not be considered. Higher Education department is not responsible for postal or other delays.

6. Attempt to exert undue influence will result in disqualification and the application will be rejected.

Sd/-
Principal Secretary to Government
Higher Education Department